# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:15-07-2024 ರಂದು ಸೋಮವಾರ ಅಪರಾಹ್ನ 12.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಮಿತಿ (CAC) ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ. ಮಂಜುನಾಥ್ ಎ.ಎಲ್. ಕುಲಸಚಿವರು ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ) | ಸದಸ್ಯ ಕಾರ್ಯದರ್ಶಿಗಳು |
| 3. | ಡಾ. ವಿಷ್ಣುಮೂರ್ತಿ ಕೆ.ಎ. ಜಂಟಿ ನಿರ್ದೇಶಕರು | ಸದಸ್ಯರು |
| 4. | ಶ್ರೀ. ಮಂಜುನಾಥ್ ಎ.ಎಲ್. ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ)ಹಣಕಾಸು ಅಧಿಕಾರಿಗಳು (ಪ್ರ) | ಸದಸ್ಯರು |
| 5. | ಪ್ರೊ. ಆರ್. ಹಿರೇಮಣಿನಾಯ್ಕ್., ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 6. | ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 7. | ಪ್ರೊ. ಜಗನ್ನಾಥ ಕೆ. ಡಾಂಗೆ, ಶಿಕ್ಷಣ ನಿಕಾಯ | ಸದಸ್ಯರು |
| 8. | ಪ್ರೊ. ಜಿ. ಪ್ರಶಾಂತನಾಯಕ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ | ಸದಸ್ಯರು |
| 9. | ಪ್ರೊ. ನಾಗರಾಜ., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್. | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಗೋಪಿನಾಥ್ ಎಸ್.ಎಂ. ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 2. | ಪ್ರೊ. ಗುರುಲಿಂಗಯ್ಯ ಎಂ., ಡೀನರು, ಕಲಾ ನಿಕಾಯ | ಸದಸ್ಯರು |

ಸಭೆಗೆ ಆಗಮಿಸಿದ್ದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸದಸ್ಯರನ್ನು ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ, ಸಂಯೋಜಿತ ಕಾಲೇಜುಗಳ ಸಂಯೋಜನಾ ವರದಿಗಳನ್ನು ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಬೇಕಾದ ಅಗತ್ಯವಿದ್ದುದ್ದರಿಂದ ಹಾಗೂ ಕೆಲವು ಮುಖ್ಯ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗಿದ್ದರಿಂದ ವಿದ್ಯಾವಿಷಯಕ ಪರಿಷತ್ತಿನ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದಸ್ಯರು ಸಲಹೆ ಸಹಕಾರ ನೀಡುವಂತೆ ಕೋರಿದರು. ನಂತರ, ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ತು

**2024:ಸಿಎಸಿ-.01:** ಕಾಲೇಜುಗಳ 2024-25ನೇ ಸಾಲಿನ ಸಂಯೋಜನ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ಸಭೆಯಲ್ಲಿ ಉಪಸ್ಥಿತರಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಪ್ರೊ.ನಾಗರಾಜರವರಿಗೆ ಸಂಯೋಜನಾ ಪ್ರಕ್ರಿಯೆ ಕುರಿತು ವಿವರಿಸುವಂತೆ ಸೂಚಿಸಲಾಯಿತು. ಪ್ರೊ.ನಾಗರಾಜ್‌ರವರು ಮಾತನಾಡಿ, ಸರ್ಕಾರದ ಯು.ಯು.ಸಿ.ಎಂ.ಎಸ್., ತಂತ್ರಾಂಶದ ಮೂಲಕ ಒಟ್ಟು 84 ಕಾಲೇಜುಗಳ ಸಂಯೋಜನಾ ಪ್ರಕ್ರಿಯೆ ನಡೆಸಲಾಗಿದೆ. ಇದರಲ್ಲಿ ತಾಂತ್ರಿಕ ಸಮಸ್ಯೆ ಇರುವ ಎರಡು ಬಿ.ಇಡಿ., ಕಾಲೇಜುಗಳು ಹಾಗೂ ಮತ್ತೊಂದು ಕಾಲೇಜು ನಿಗದಿತ ಅಂಕಕ್ಕಿಂತ ಕಡಿಮೆ ಅಂಕ ಪಡೆದಿರುವುದರಿಂದ ಒಂದು ಕಾಲೇಜು ಸೇರಿದಂತೆ ಒಟ್ಟು ಮೂರು ಕಾಲೇಜುಗಳನ್ನು ಹೊರತುಪಡಿಸಿ ಉಳಿದ 81 ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಸ್ಥಳೀಯ ತಪಾಸಣಾ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸನ್ನು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಬೇಕಾಗಿದೆ ಎಂದರು.



Scanned with OKEN Scanner

ನಿರ್ಣಯ: ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2024-25ನೇ ಸಾಲಿನ ಸಂಯೋಜನಾ ವರದಿಗಳನ್ನು ಸಭೆಯು ಅನುಮೋದಿಸಿತು.

**2024:ಸಿಎಸಿ-02:** ಪಿಹೆಚ್.ಡಿ ಪರಿಷ್ಕೃತ ವಿನಿಯಮ-2024 ರ ಬಗ್ಗೆ

ನಿರ್ಣಯ: ಪಿಹೆಚ್.ಡಿ ಪರಿಷ್ಕೃತ ವಿನಿಯಮ-2024ರ ಕರಡನ್ನು ಸಭೆಯು ಪರಿಶೀಲಿಸಿತು. ಸಭೆಯಲ್ಲಿ ಚರ್ಚಿಸಿದ ಪ್ರಕಾರ ಪರಿಷ್ಕೃತ ವಿನಿಯಮಕ್ಕೆ ಅಗತ್ಯವಿರುವ ತಿದ್ದುಪಡಿಗಳನ್ನು ಸೇರ್ಪಡೆ ಮಾಡಿ ಮುಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆ ಪಡೆದುಕೊಂಡು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು. ಪಿಹೆಚ್.ಡಿ ಪರಿಷ್ಕೃತ ವಿನಿಯಮ ಸಮಿತಿಗೆ ಪ್ರೊ.ಜಿ. ಪ್ರಶಾಂತನಾಯಕ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನೆ ಇವರನ್ನು ಸದಸ್ಯರಾಗಿ ಸೇರ್ಪಡೆಗೊಳಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2024:ಸಿಎಸಿ-03:** ವಿಶ್ವವಿದ್ಯಾಲಯದ 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, 2024-25ನೇ ಸಾಲಿನ ಸ್ನಾತಕ ಪದವಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾಪಟ್ಟಿಯನ್ನು ಈಗಾಗಲೇ ದಿನಾಂಕ: 04-07-2024ರ ಸುತ್ತೋಲೆಯ ಮೂಲಕ ಪರಿಚಲಿಸಲಾಗಿತ್ತು. ಆದರೆ, ನಂತರದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 201 ಯುಎನ್‌ಇ 2023, ಬೆಂಗಳೂರು, ದಿನಾಂಕ: 06-07-2024ರಲ್ಲಿ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಷ್ಕರಿಸಿದ್ದು, ಅದನ್ನು ಅಳವಡಿಸುವ ಕುರಿತಾಗಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಸಭೆಗೆ ಮಂಡಿಸಲಾಗಿದೆ ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಸರ್ಕಾರದ ಸುತ್ತೋಲೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2024-25ನೇ ಸಾಲಿನ ಸ್ನಾತಕ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪರಿಷ್ಕರಿಸಿ ಅನುಮೋದಿಸಿತು.

**Revised Academic Calender for Under Graduate Courses for the Academic Year 2024-25**

| Sl. No. | Particulars | Existing Dates | Govt. Dates | Modified Dates |
|---|---|---|---|---|
| 1 | Commencement of I SemesterAdmission | 25-07-2024 | 15-06-2024 | 13-07-2024 |
| 2 | Last date for Admission to I Semester without penal fee | 10-08-2024 | 06-07-2024 | 20-07-2024 |
| 3 | Last date for Admission to I Semester with penal fee | 16-08-2024 | 13-07-2024 | 31-07-2024 |
| 4 | End of II, IV and VI Semester of 2023-24 | | | 01-09-2024 |
| 5 | Commencement of I semester classes | | 08-07-2024 | 25-07-2024 |
| 6 | Commencement of III & V Semester classes of 2024-25 | 12-08-2024 | 08-07-2024 | 01-09-2024 |
| 7 | End of I, III & V semester classes | 11-12-2024 | 06-11-2024 | 06-11-2024 |
| 8 | Commencement of Examination &Vacation | 21-12-2024 to 30-01-2025 | 08-11-2024 to 21-12-2024 | 08-11-2024 to 21-12-2024 |



Scanned with OKEN Scanner

| | | | | |
|---|---|---|---|---|
| 7 | Commencement of II, IV & VI Semester classes | 10-02-2025 | 23-12-2024 | 23-12-2024 |
| 8 | End of II, IV & VI Semester Classes | 09-06-2025 | 19-04-2025 | 19-04-2025 |
| 9 | Commencement of Examination &Vacation | 20-06-2025 to 05-08-2025 | 21-04-2025 to 05-06-2025 | 21-04-2025 to 05-06-2025 |

**2024:ಸಿಎಸಿ–04:** ವಿವಿಧ ಸ್ನಾತಕ ಅಧ್ಯಯನ ಮಂಡಳಿಯಿಂದ ಅನುಮೋದನೆಗೊಂಡ ಪಠ್ಯಕ್ರಮಗಳನ್ನು ಅನುಮೋದನೆಗಾಗಿ ಮಂಡಿಸುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರದ ಆದೇಶದನ್ವಯ 2024–25ನೇ ಸಾಲಿನ ಸ್ನಾತಕ ಪದವಿಯ 1 ಮತ್ತು 2ನೇ ಸೆಮಿಸ್ಟರ್‌ಗಳ ಕೆಲವು ವಿಷಯಗಳ ಎಸ್.ಇ.ಪಿ., ಪಠ್ಯಕ್ರಮಗಳನ್ನು ವಿವಿಧ ಸ್ನಾತಕ ಅಧ್ಯಯನ ಮಂಡಳಿಗಳು ಸಿದ್ಧಪಡಿಸಿ ಸಲ್ಲಿಸದ ಪಠ್ಯಕ್ರಮಗಳನ್ನು ಸಭೆಯು ಅನುಮೋದಿಸಿತು

**2024:ಸಿಎಸಿ–05:** **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**2024:ಸಿಎಸಿ–05(1):** Common Guidelines for Internship/Project for Undergraduate Students-2024ನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಎನ್.ಇ.ಪಿ., ಪಠ್ಯಕ್ರಮದ ಪ್ರಕಾರ ಇಂಟರ್ನ್‌ಶಿಪ್ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ UUCMS ವಿಭಾಗವು ಸಿದ್ಧಪಡಿಸಿರುವ Common Guidelines for Internship/Project for Undergraduate Students-2024ನ್ನು ಸಭೆಯು ಅನುಮೋದಿಸಿತು ಹಾಗೂ ಇದನ್ನು ಎನ್.ಇ.ಪಿ. ಅಡಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಳವಡಿಸಲು ಸರ್ವಾನುಮತದಿಂದ ನಿರ್ಣಯಿಸಿತು.

ಅಂತಿಮವಾಗಿ ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಮತ್ತು ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು**
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/-
**ಕುಲಪತಿಗಳು**



Scanned with OKEN Scanner